DW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.307/2018

| | |
|---|---|
| ಸಾಕ್ಷಿದಾರರ ಹೆಸರು | ಕುಮಾರ್ |
| ತಂದೆಯ ಹೆಸರು | ಕೃಷ್ಣಪ್ಪ |
| ವಯಸ್ಸು | 44 ವರ್ಷ |
| ವೃತ್ತಿ | ಕೆ ಎಸ್ ಆರ್ ಟಿ ಸಿ ನಲ್ಲಿ ನಿರ್ವಾಹಕ |
| ವಿಳಾಸ | ಕೋಡಿಹಳ್ಳಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 16.04.2026 |

**ಮೌಖಿಕ ಮುಖ್ಯ ವಿಚಾರಣೆ : ಆರೋಪಿಯಿಂದ**

ನಂಜೇಗೌಡ ಅಂದರೆ ಪಿರ್ಯಾದಿ ನನ್ನ ಬಾಲ್ಯ ಸ್ನೇಹಿತ. 2012-13 ರಲ್ಲಿ ನನಗೆ ಹಣಕಾಸಿನ ಸಮಸ್ೆಯ ಇತ್ತು. ಪಿರ್ಯಾದಿ ನನ್ನ ಬಾಲ್ಯ ಸ್ನೇಹಿತನಾಗಿದ್ದರಿಂದ 2013 ರಲ್ಲಿ ಆತನ ಬಳಿ ಹಣ ಸಹಾಯಕ್ಕಾಗಿ ಕೇಳಲು ಹೋಗಿರುತ್ತೇನೆ. ನಾನು 1 ಲಕ್ಷ ಸಾಲ ಕೇಳಿದಾಗ ಆತ ನಾನು ಬಡ್ಡಿ ಜಾಸ್ತಿ ತೆಗೆದುಕೊಳ್ಳುತ್ತೇನೆ ಆದರೆ ನೀನು ನನ್ನ ಸ್ನೇಹಿತನಾದ್ದರಿಂದ ಶೇಕಡಾ 5 ರಂತೆ ಹಣ ಕೊಡುತ್ತೇಂದು ಹೇಳಿದ್ದು ಅದಕ್ಕೆ ನಾನು ಒಪ್ಪಿ ಕೊಂಡಿರುತ್ತೇನೆ. ಆಗ ಭದ್ರತೆಯ ಸಂಬಂಧ ಪತ್ರ, ದಾಖಲಾತಿ ಅಥವಾ ಚೆಕ್ ನ್ನು ಕೇಳಿದಾಗ ಪತ್ರ ಯಾವುದು ಇಲ್ಲವೆಂದು ಹೇಳಿದಾಗ ಆತ ನನ್ನ ಬಳಿ ಖಾಲಿ ಚೆಕ್ಕುಗಳನ್ನು ಕೇಳಿದ್ದರು. ಒಂದು ಲಕ್ಷ ಸಂಬಂಧ ನಾನು ನನಗೆ ಸಂಬಂಧಿಸಿದ ಒಂದು ಖಾಲಿ ಸಹಿ ಮಾಡಿದ ಚೆಕ್ ನ್ನು ತೆಗೆದುಕೊಂಡು ಹೋದಾಗ ಆತ ನಿನ್ನ ಹೆಂಡತಿಗೆ ಸಂಬಂಧಿಸಿದ ಒಂದು ಸಹಿ ಮಾಡಿದ ಖಾಲಿ ಚೆಕ್ ಹಾಗೂ ನನಗೆ ಸಂಬಂಧಿಸಿದ 2 ಸಹಿ ಮಾಡಿದ ಖಾಲಿ ಚೆಕ್ ಕೊಡಲು ಕೇಳಿದ್ದರು. ಆಗ 1 ಲಕ್ಷಕ್ಕೆ ಒಂದು

ಚೆಕ್ ಸಾಕು ಎಂದರೆ ಅವರು ನಾನೇನು ಮಾಡುವುದಿಲ್ಲ ಎಂದು ಹೇಳಿ ನನ್ನ ಬಳಿ ಈ ರೀತಿ 3 ಚೆಕ್ಕುಗಳನ್ನು ಪಡೆದಿರುತ್ತಾರೆ.

2016 ರಲ್ಲಿ ನನಗೆ ಸ್ವಲ್ಪ ಪಿ ಎಫ್ ಹಣ ಬಂದಿರುತ್ತದೆ ಅದರ ಜೊತೆ ಕೂಡಿಟ್ಟ ಸ್ವಲ್ಪ ಹಣವನ್ನು ಸೇರಿಸಿ 1,15,000/- ಅಂದರೆ 3 ತಿಂಗಳ ಬಡ್ಡಿ ಸೇರಿಸಿ ಅವರಿಗೆ ಹಣವನ್ನು ವಾಪಸ್ ಕೊಟ್ಟಿರುತ್ತೇನೆ. ಚೆಕ್ ನ್ನು ಕೇಳಿದಾಗ ಮನೆಯಲ್ಲಿ ಎಲ್ಲೋ ಇಟ್ಟಿರುವುದಾಗಿ ಅದನ್ನು ನಂತರ ಕೊಡುವುದಾಗಿ ಹೇಳಿದರು. ಒಂದು ವಾರ-ಹದಿನೈದು ದಿನಗಳ ನಂತರ ನಾನು ಮತ್ತೆ ಚೆಕ್ಕುಗಳನ್ನು ಕೇಳಿದಾಗ ಕೊಡಲಿಲ್ಲ ನಂತರ ನನ್ನ ತಂದೆ ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದು ನಿನ್ನ ಮಗನನ್ನು ಕೋರ್ಟಿಗೆ ಕರೆಸುತ್ತೇನೆಂದು ಹೇಳಿ ವಾಪಸ್ ಕಳುಹಿಸಿರುತ್ತಾರೆ. ನಂತರ ನನಗೆ ಆರೋಗ್ಯ ಸಮಸ್ಯೆ ಇದ್ದ ಕಾರಣ ಸುಮ್ಮನಾಗಿ ಬಿಟ್ಟೆ ನಂತರ ನನಗೆ ಲಾಯರ್ ನೋಟೀಸ್ ಬಂದಿರುತ್ತದೆ. ನಂತರ ನಾನು ಅವರನ್ನು ಕೇಳಿದಾಗ ಮತ್ತೆ ಅವರು ಅದೇ ರೀತಿ ಮಾತನಾಡಿದಾಗ ನ್ಯಾಯಾಲಯಕ್ಕೆ ಬಂದಿರುತ್ತೇನೆ.

2017ರಲ್ಲಿ ಲಾಯರ್ ಮುಖಾಂತರ ನೋಟೀಸ್ ಬಂದ ಮೇಲೆ ದೂರಿನ ವಿಚಾರ ಗೊತ್ತಾಗಿರುತ್ತದೆ. ಆತ ನನ್ನ ವಿರುದ್ದ ಒಂದು ಸುಳ್ಳು ಮೊಕದ್ದಮೆ ಹೂಡಿದ್ದು ನನ್ನನ್ನು ಸದರಿ ಪ್ರಕರಣದಿಂದ ಖುಲಾಸೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

DW.1

**ಕನಕಪುರ .**